[ Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

## IN THE COURT OF Addl. CIVIL JUDGE & J.M.F.C., KARKALA.

## Criminal Case No. 2118/2023

ಪಿ.ಡಬ್ಲ್ಯು : 5 ಸಿ.ಡಬ್ಲ್ಯು : 4

ಸಾಕ್ಷಿದಾರನ ಹೆಸರು : ಸಂತೋಷ್ ಕಿರಣ್ ಕೊಟ್ಯಾನ್
ತಂದೆಯ ಹೆಸರು : ಸುಂದರ್ ಕೊಟ್ಯಾನ್
ಪ್ರಾಯ : 44 ವರ್ಷ
ಉದ್ಯೋಗ : ಬಿಸಿನೆಸ್
ವಾಸ : ನಿಟ್ಟೆ ಗ್ರಾಮ, ಕಾರ್ಕಳ

ದಿನಾಂಕ 02-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನನಗೆ ಚಾಸಾ-2 ರವರ ಪರಿಚಯ ಇದೆ. ಅವರು ನಿಟ್ಟೆ ಗ್ರಾಮದ ಪಂಚಾಯಿತಿ ಸದಸ್ಯರಾಗಿರುತ್ತಾರೆ. ದಿನಾಂಕ 08-08-2023 ರಂದು ನಿಟ್ಟೆ ಗರಡಿ ಸಮೀಪ ಮೆಸ್ಕಾಂ ಕಚೇರಿಯ ಬಳಿ ಪೊಲೀಸರು ಮಹಜರಿಗೆ ಕರೆದಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತತು 5 ರವರು ಹಾಜರಿರುತ್ತಾರೆ. ಚಾಸಾ-2 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ಅಲ್ಲಿ ಒಂದು ಗ್ರೇ ಬಣ್ಣದ ವ್ಯಾಗನರ್ ಕಾರು ಮತ್ತು ನೇರಳೆ ಬಣ್ಣದ ದ್ವಿಚಕ್ರ ವಾಹನ ಮತ್ತು ಹೆಲ್ಮೆಟ್ ಇದ್ದು ಅದನ್ನು ಪೋಲೀಸರು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಸದರಿ ತಕ್ಷೀರು ಸ್ಥಳದ ಮಹಜರನ್ನು ಗುರುತಿಸಿದ್ದು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನಿಪಿ-8 ರಲ್ಲಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಸ್ಥಳದ ನಕಾಶೆ ಗುರುತಿಸಿದ್ದು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನಿಪಿ-9 ರಲ್ಲಿ

ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ಸ್ಥಳ ಮಹಜರನ್ನು ಮಾಡುವಾಗ ತೆಗೆದ ಭಾವಚಿತ್ರಗಳನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ 7 ಭಾವಚಿತ್ರಗಳನ್ನು ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್ ಕೆ ಎಸ್ ಈ ಹಂತದಲ್ಲಿ ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ